ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

18

ಇಲಾಖೆ / ವಿಷಯ : DEPARTMENT / SUBJECT: ಕಂದಾಯ (ಭೂ ಸುಧಾರಣಾ ಕಾಯ್ದೆ ತಿದ್ದುಪಡಿ)

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 26/9/20

# ಭೂ ಸುಧಾರಣೆ ಕಾಯ್ದೆ ತಿದ್ದುಪಡಿ ಪರ್ಯಾಲೋಚನೆ

ಬೆಂಗಳೂರು: ಭೂಸುಧಾರಣೆ ಕಾಯ್ದೆ ತಿದ್ದುಪಡಿಯಿಂದ ರೈತರಿಗೆ ಯಾವುದೇ ತೊಂದರೆ ಆಗುವುದಿಲ್ಲ, ಇದರಿಂದ ಕೃಷಿಯಲ್ಲಿ ತೊಡಗುವವರಿಗೆ ಉತ್ತೇಜನ ನೀಡಲಾಗುತ್ತಿದೆ ಎಂದು ಕಂದಾಯ ಸಚಿವ ಆರ್. ಅಶೋಕ್ ಹೇಳಿದ್ದಾರೆ.

ವಿಧಾನಸಭೆಯಲ್ಲಿ ವಿಧೇಯಕದ ಕುರಿತು ವಿವರಣೆ ನೀಡಿದ ಅವರು, ಭೂ ಸುಧಾರಣೆ ಕಾಯ್ದೆ ಜಾರಿಯಿಂದ ಆಧುನಿಕ ಕೃಷಿಗೆ ಉತ್ತೇಜನ ನೀಡಿದಂತಾಗುತ್ತದೆ. ಪಕ್ಕದ ಆಂಧ್ರ ಪ್ರದೇಶ, ತಮಿಳುನಾಡು ಹಾಗೂ ಮಹಾರಾಷ್ಟ್ರದಲ್ಲಿ ಕೃಷಿ ಭೂಮಿ ಖರೀದಿಸಲು ಯಾವುದೇ ಅಡ್ಡಿಯಿಲ್ಲ, ಹೀಗಾಗಿ ಅಲ್ಲಿ ಕೃಷಿ ರಫ್ತು ಪ್ರಮಾಣ ಹೆಚ್ಚಾಗಿದೆ. ತಮಿಳುನಾಡಿನಲ್ಲಿ ಶೇ. 17ರಷ್ಟು ಕೃಷಿ ಉತ್ಪನ್ನ ರಫ್ತು ಮಾಡಿದ್ದರೆ. ಕರ್ನಾಟಕದಲ್ಲಿ ಶೇ 5 ರಷ್ಟು ಮಾತ್ರ ರಫ್ತು ಮಾಡಲಾಗುತ್ತಿದೆ.

ಅಲ್ಲದೇ ಭೂಸುಧಾರಣೆ ಕಾಯ್ದೆಯ ಕಲಂ 79ಎ, ಮತ್ತು 79 ಬಿ ದುರುಪಯೋಗವಾಗುತ್ತಿವೆ. ಈ ಕಾಯ್ದೆಗಳನ್ನು ಅಧಿಕಾರಿಗಳು ದುರುಪಯೋಗ ಪಡೆಸಿಕೊಳ್ಳುತ್ತಿದ್ದಾರೆ. ರಾಜ್ಯದಲ್ಲಿ 83171 ಪ್ರಕರಣಗಳು ಬಾಕಿ ಉಳಿದುಕೊಂಡಿವೆ. ಯಾವುದೂ ಇತ್ಯರ್ಥವಾಗಿಲ್ಲ. ಇದರಿಂದ ಸರ್ಕಾರಕ್ಕೆ ಯಾವುದೇ ಆದಾಯವೂ ಬರುತ್ತಿಲ್ಲ ಎಂದು ಹೇಳಿದರು.

ಈ ಕಾಯ್ದೆ ತಿದ್ದುಪಡಿಯಿಂದ ಕೈಗಾರಿಕೆಗೆ ಕೃಷಿ ಜಮೀನು ಹೋಗುತ್ತದೆ ಎಂದು ತಪ್ಪು ಮಾಹಿತಿ ನೀಡಲಾಗುತ್ತಿದೆ. ರಾಜ್ಯದಲ್ಲಿ ಕೈಗಾರಿಕೆಗೆ ಶೇ 1 ಕ್ಕಿಂತ ಕಡಿಮೆ ಜಮೀನು ನೀಡಲಾಗಿದೆ. ಅಲ್ಲದೆ ರಾಜ್ಯದಲ್ಲಿ 11 ಲಕ್ಷ ಹೆಕ್ಟೇರ್ ಕೃಷಿ ಮಾಡುವವರಿಲ್ಲದೆ ಪಾಳು ಭೂಮಿ ಇದೆ. ಅದನ್ನು ಕೃಷಿ ಮಾಡುವ ಆಸಕ್ತರು ಖರೀದಿಸಲು ಅವಕಾಶ ದೊರೆಯಲಿದೆ.

ನಮ್ಮ ರಾಜ್ಯದಲ್ಲಿ ಮೂಲ ಕೃಷಿ ಮಾಡದವರು ಕೃಷಿ ಜಮೀನು ಖರೀದಿ ಮಾಡಲು ಅವಕಾಶ ಇಲ್ಲದಿರುವದರಿಂದ ಪಕ್ಕದ ರಾಜ್ಯಗಳಿಗೆ ಹೋಗಿ ಜಮೀನು ಖರಿದಿ ಮಾಡುತ್ತಿದ್ದಾರೆ. ನಮ್ಮವರು ನಮ್ಮ ರಾಜ್ಯದಲ್ಲಿಯೇ ಜಮೀನು ಖರೀದಿಸಲು ಅವಕಾಶ ಕಲ್ಪಿಸಲಾಗುತ್ತಿದೆ ಎಂದರು ಇನ್ನು 5 ಜನ ಇರುವ ಕುಟುಂಬದವರು 216 ಎಕರೆ ಜಮೀನು ಹೊಂದಬಹುದು ಎಂದು ಬಿ.ಡಿ ಜತ್ತಿ ಅವರ ಸಂದರ್ಭದಲ್ಲಿಯೇ ಸದನ ಸಮಿತಿ ವರದಿ ನೀಡಿದೆ ಆದರಲ್ಲಿ ಯಾವುದೇ ಬದಲಾಣೆ ಮಾಡಿಲ್ಲ ಎಂದರು.

ಈ ಕುರಿತು ಶನಿವಾರ ಚರ್ಚಿಸುವುದಾಗಿ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದರಿಂದ ಸದನವನ್ನು ಶನಿವಾರಕ್ಕೆ ಮುಂದೂಡಿದರು. ಇನ್ನು ಶುಕ್ರವಾರ ಎಲೆಕ್ಟ್ರಿಕಲ್ ವಾಹನಗಳ ಖರಿದಿ ಹೆಚ್ಚಳಕ್ಕೆ ಸ್ಟಾಂಪ್ ಡೂಟಿ ರಿಯಾಯ್ತಿ ನೀಡುವ ಸ್ಟಾಂಪ್ ಡ್ಯೂಟಿ ವಿಧೇಯಕ, ಲಕ್ಕುಂಡಿ ಪ್ರಾಧಿಕಾರದ ವಿಧೇಯಕ, ಎಪಿಎಂಸಿಗಳಲ್ಲಿ ವರ್ತಕರು ಹೆಚ್ಚು ದಾಸ್ತಾನು ಮಾಡಲು ಅವಕಾಶ ಕಲ್ಪಿಸುವ ವಿಧೇಯಕಕ್ಕೆ ಅಂಗೀಕಾರ ನೀಡಲಾಯಿತು.